ದಿನಾಂಕ 04.07.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-</u>

ನನ್ನ ತಾಯಿ ಹಾಗೂ ನನ್ನ ಆಧಾರ್ ಕಾರ್ಡ್‌ಗಳ ನೋಟರೈಸ್ಡ್ ಪ್ರತಿಗಳನ್ನು ಕ್ರಮವಾಗಿ ನಿಪಿ-13 ಮತ್ತು ನಿಪಿ-14, ನಮ್ಮ ಕುಟುಂಬದ ಪಡಿತರ ಚೀಟಿಯ ನೋಟರೈಸ್ಡ್ ಪ್ರತಿಯನ್ನು ನಿಪಿ-15, ನನ್ನ ತಾಯಿ ಹಾಗೂ ನನ್ನ ಚುನಾವಣಾ ಗುರುತಿನ ಚೀಟಿಗಳ ನೋಟರೈಸ್ಡ್ ಪ್ರತಿಗಳನ್ನು ಕ್ರಮವಾಗಿ ನಿಪಿ-16 ಮತ್ತು ನಿಪಿ-17, ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನಿಪಿ-18, 5 ಕಂದಾಯ ರಶೀದಿಗಳನ್ನು ಕ್ರಮವಾಗಿ ನಿಪಿ-19 ರಿಂದ ನಿಪಿ-23, 4 ವಿದ್ಯುತ್ ಬಿಲ್‌ಗಳನ್ನು ಕ್ರಮವಾಗಿ ನಿಪಿ-24 ರಿಂದ ನಿಪಿ-27 ಎಂದು ಗುರುತಿಸಲಾಯಿತು.

ನಿಪಿ-13 ರಿಂದ ನಿಪಿ-17 ರ ಮೂಲ ದಾಖಲೆಗಳನ್ನು ಸಾಕ್ಷಿದಾರರು ಹಾಜರುಪಡಿಸಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ತಾಳೆ ನೋಡಿ ಮೂಲ ದಾಖಲೆಗಳು ಸಾಕ್ಷಿದಾರರ ದೈನಂದಿಕ ಕಾರ್ಯಗಳಿಗೆ ಅವಶ್ಯಕತೆ ಇದೆ ಎಂದು ಹೇಳಿದ ಕಾರಣ ಮೂಲ ದಾಖಲೆಗಳನ್ನು ಅವಶ್ಯಕತೆ ಇದ್ದ ಪಕ್ಷದಲ್ಲಿ ಹಾಜರುಪಡಿಸುವ ಷರತ್ತಿಗೊಳಪಡಿಸಿ ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.